ಅಂದುಕೊಳ್ಳುವ ನಮ್ಮ ಜನರ ಮುಗ್ಧ ನಂಬಿಕೆ ಬಗ್ಗೆ ಖುಷಿಯೂ ಕಿರಿಕಿರಿಯೂ ಒಟ್ಟಿಗೆ ಆಗುತ್ತಿತ್ತು.

ನಾನು ಕೃಷಿ ಕುಟುಂಬದ ಗೃಹಿಣಿಯಾದ ಕಾರಣ ಮಾಡಲು ಅಷ್ಟೂ ಕೆಲಸಗಳಿರುವಾಗ ಭಾಷಣಕ್ಕೆ ಹೇಗೆ ತಯಾರಿ ಮಾಡುವುದು? ಯಾರಾದರೂ ಭಾಷಣಕ್ಕೆ ಕರೆದರೆ ಮತ್ತೆ ಒಳೊಗೊಳಗೆ ತಳಮಳ. ಈಗ ಮೊದಲಿನಂತೆ ಬಾಯಿಪಾಠ ಮಾಡುವಷ್ಟು ತಾಳ್ಮೆಯೂ ಇಲ್ಲ, ನೆನಪೂ ಉಳಿಯುತ್ತಿರಲಿಲ್ಲ. ಮತ್ತೆಂತ ಮಾಡುವುದು? ಭಾಷಣಕ್ಕೆ ಕರೆದ ಮೇಲಿಂದ ಮತ್ತೆ ನಿದ್ದೆ ಕೆಡುತ್ತದೆ. ಎಂತ ಮಾತಾಡುವುದು ಅನ್ನುವುದೊಂದೇ ಚಿಂತೆ ಹತ್ತಿಕೊಳ್ಳುತ್ತದೆ. ದೋಸೆ ಹೊಯ್ಯುವಾಗ, ಹಸುವಿನ ಹಾಲು ಕರೆಯುವಾಗ, ಬಟ್ಟೆ ತೊಳೆಯುವಾಗ, ಪಾತ್ರೆ ತಿಕ್ಕುವಾಗ ಗುಣುಗುಣು ಅಂತ ಏನೇನೋ ಮಾತಾಡಿಕೊಳ್ಳುವುದೇ ಆಯಿತು. ಇವಳೆಂತ ಒಬ್ಬಳೇ ಗೊಣಗುಟ್ಟುವುದು ಅಂತ ಮನೆ ಮಂದಿ ಬಗ್ಗಿ ನನ್ನ ನೋಡಿ ಹೋಗುವುದು, ಇದನ್ನೆಲ್ಲ ನೋಡಿ ಮಕ್ಕಳು ಗುಸು ಗುಸು ಮಾತಾಡಿಕೊಂಡು ನಗುವುದನ್ನೂ ಸಹಿಸಿಕೊಂಡೆ. ದಿನದ ಯಾವ ನೆಮ್ಮದಿಯನ್ನೂ ಈ ಭಾಷಣ ಅನುಭವಿಸಲಿಕ್ಕೆ ಬಿಡುವುದಿಲ್ಲ ಅನ್ನುವುದು ಗೊತ್ತಾದ ಮೇಲೆ ಹೇಗಾದರೂ ಮಾಡಿ ಇದರಿಂದ ಬಿಡಿಸಿಕೊಳ್ಳುವ ದಾರಿಯನ್ನು ಹುಡುಕತೊಡಗಿದೆ.

ಈ ಬರವಣಿಗೆಯನ್ನ ಬಗಲಿಗೆ ಹಾಕಿಕೊಂಡ ಶುರುವಿನಲ್ಲಿ ಕಾಲೇಜು ಒಂದರಲ್ಲಿ 'ನಾನೇಕೆ ಬರೆಯುತ್ತೇನೆ' ಅನ್ನುವ ಉಪನ್ಯಾಸ ಮಾಲಿಕೆಗೆ ನನ್ನನ್ನು ಆಹ್ವಾನಿಸಿದ್ದರು. ಆಗ ವಯಸ್ಸು ಸಣ್ಣ ಇತ್ತು, ಹೆಚ್ಚೆಂದರೆ ಇಪ್ಪತ್ತೊಂದು, ಉರು ಹೊಡೆದದ್ದೂ ನೆನಪಿರುತ್ತಿತ್ತು. ಯಾವುದೋ ಉಮೇದಿನಲ್ಲಿ ಒಪ್ಪಿಕೊಂಡು ಎಂದಿನಂತೆ ಒಂದೇ ಸಮ ದರದರ ಅಂತ ಒದರಿದ್ದು ಎಲ್ಲರಿಗೆ ಇಷ್ಟವಾಗಿ ಅಲ್ಲಿದ್ದ ಸಮಾಜ ಸೇವಕರೊಬ್ಬರು ಈ ಸಲ ಪಂಚಾಯಿತಿ ಇಲೆಕ್ಷನ್‌ಗೆ ನೀವೇ ನಿಲ್ಲಬೇಕು ಅಂತ ಹೇಳಿದಾಗ ಎಲ್ಲಿಯ ಸಾಹಿತ್ಯ? ಎಲ್ಲಿಯ ರಾಜಕೀಯ? ಎದೆ ದಸಕ್ ಎಂದಿತು. ಇನ್ನು ಮುಂದೆ ಭಾಷಣದ ಸಾವಾಸಕ್ಕೆ ಎಳ್ಳು ನೀರು ಬಿಡಲೇಬೇಕೆಂದು ಗಟ್ಟಿ ತೀರ್ಮಾನ ಮಾಡಿದ್ದೆ. ಆದರೆ, ಸಾರ್ವಜನಿಕ ಪ್ರಪಂಚದಲ್ಲಿ ನಮ್ಮ ನಿರ್ಧಾರಕ್ಕೆ ಎಲ್ಲಿಯ ಬೆಲೆ?

ಎಷ್ಟು ನಿರಾಕರಿಸಿದರೂ ಒಮ್ಮೊಮ್ಮೆ ಅಭಿಮಾನಕ್ಕೋ, ಸ್ನೇಹಕ್ಕೋ ಕಟ್ಟು ಬಿದ್ದು ಒಪ್ಪಿಕೊಳ್ಳಲೇಬೇಕಿತ್ತು. ಈಗೀಗ ಮೊದಲಿನಂತೆ ಮಾತನಾಡಲು ಸಾಧ್ಯ ಆಗುತ್ತಿರಲಿಲ್ಲ. ಏನು ಹೇಳಬೇಕೋ ಅದು ಮೈಕ್ ಮುಂದೆ ನಿಂತಾಗ ಸಭಿಕರ ತಲೆಗಳೇ ಕಂಡು ನನ್ನ ತಲೆಯೊಳಗೆ ಇದ್ದದ್ದು ಮರೆತೇ ಹೋಗುತ್ತಿತ್ತು.

ಛೆ! ನಿನ್ನೆ ಎಷ್ಟು ಚೆನ್ನಾಗಿ ತಯಾರಿ ಮಾಡಿದ್ದೆಲ್ಲಾ ನೆನಪಿಗೆ ಬರದೇ ಸತಾಯಿಸಿತ್ತಲ್ಲ? ಮನೆಗೆ ಬಂದು ನೂರೆಂಟು ಸಲ ಅದರ ಬಗ್ಗೆ ಕೊರಗುವುದೇ ಆಯಿತು. ಇನ್ನು ನೀನು ಪಾಯಿಂಟ್ಸ್ ಬರಕೊಂಡು ಹೋಗಮ್ಮಾ... ಅಂತ ಮಗಳು ಬಿಟ್ಟಿ ಉಪದೇಶ ಕೊಟ್ಟ ಮೇಲೆ ಅದು ಹೌದಲ್ಲ ಅಂತ ನನಗೂ ಅನ್ನಿಸಿತು. ವೇದಿಕೆ ಹತ್ತಿದಾಕ್ಷಣ ಮನಸು ಖಾಲಿಯಾಗಿ, ನಾನು ಯಾಕೆ ಇಲ್ಲಿ ನಿಂತಿದ್ದೇನೆ ಅನ್ನುವುದೇ ಪ್ರಶ್ನೆಯಾಗಿ ಎಲ್ಲವೂ ಅಯೋಮಯ ಅನ್ನಿಸುವಾಗ, ಈ ನೋಟ್ ಪಾಯಿಂಟ್ಸು ಎಷ್ಟೋ ಸಲ ಉಪಯೋಗಕ್ಕೆ ಬಂತೆನ್ನಿ. ಆದರೆ, ಈಗ ಮತ್ತೊಂದು ಸಮಸ್ಯೆ ಎದುರಾಗಿದೆ. ಎಲ್ಲಾ ವೇದಿಕೆಗೆ ಬೆಳಕು ಸರಿ ಬೀಳುವುದಿಲ್ಲ. ಆಗೆಲ್ಲ ಈ ಪಾಯಿಂಟ್ಸು ಕೂಡ ಸರಿ ಕಾಣದೆ ಎಡವಟ್ಟು ಆಗಲಿಕ್ಕೆ ಶುರುವಾಯಿತು. ಡಾಕ್ಟ್ರು ನಿಮಗೆ ಚಾಲೀಸು ಅಂತ ಕನ್ನಡಕ ಹಾಕಲು ಹೇಳಿದ್ದಾರೆ. ಈ ಮರೆವು, ಚಾಲೀಸು, ಯಾವ ಪಡಿಪಾಟಲು ಬೇಡವೆಂದು ಈ ಭಾಷಣದ ಹೊರೆ ಇಳಿಸಿಕೊಂಡು ನಿರಾಳವಾಗಬೇಕೆಂದು ನೂರಾ ಒಂದನೇ ಸಲ ಶಪಥ ಮಾಡಿದರೂ ಈ ಕಾರ್ಯಕ್ರಮದ ಸಂಯೋಜಕರು ಕೇಳಬೇಕೆ? ನಮ್ಮ ಪ್ರಾಬ್ಲಮ್ಮು ಯಾರಿಗೆ ಹೇಳೋಣ?

ಇನ್ನು ಈಗ ತಾನೇ ಫೋನಾಯಿಸಿದವರು ಇನ್ನೇನು ಭಾಷಣ ಕರೆಯೋದಿಕ್ಕೆ ಬರ್ತಾ ಇದ್ದಾರೆ. ಯಾವ ಸಬೂಬು ಹೇಳಿದರೂ ಅವರಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಈ ನಡುವಲ್ಲಿ ನನಗೊಂದು ಡೌಟು ಬರುತ್ತಿದೆ. ನಿಜಕ್ಕೂ ನಾ ಅಷ್ಟು ಚೆಂದ ಬಾಷಣ ಮಾಡ್ತೇನಾ? ಅಸಲಿಗೆ ನನ್ನ ಭಾಷಣವನ್ನ ಈಗ ಬಂದವರು ಕೇಳಿಯೇ ಇಲ್ಲ. ಕೇಳಿದರೆ ಇಲ್ಲಿ ತನಕ ಬರುವ ಸಾಹಸವಂತೂ ಅವರು ಮಾಡುತ್ತಿರಲಿಲ್ಲ. ಇನ್ನು ಯಾರೂ ಮಹಿಳೆಯರು ಅವರಿಗೆ ಸಿಗಲೇ ಇಲ್ವಾ? ಯಾರು ಭಾಷಣಕ್ಕೆ ಒಪ್ಪಿಕೊಳ್ಳಲೇ ಇಲ್ಲವಾ? ಎಂದಿನಂತೆ ನನ್ನ ಊರಿನ ಗೆಳತಿಯೊಬ್ಬಳು ಅವಳಿಗೆ ವಹಿಸಿದ ಭಾಷಣದ ಹೊರೆಯನ್ನ ನನಗೆ ವರ್ಗಾಯಿಸಿದಳಾ?